(ii) *re* : Closure of some Schools in N. K. District as a result of the orders of the D.P.I.

Sri D. S. NADKARNI (Ankola).—I call the attention of the Minister for Education to the closure of some Schools in North Kanara District as a result of order passed by the Director of Public Instruction.

† Sri N. M. KOTRABASAIAH SOGI (Deputy Minister for Education).—The Hon'ble Member has drawn the attention of Government to the order passed by the Director of Public Instruction for closing 9 Schools in North Kanara District. Government have been informed by the Director of Public Instruction that advance notices were issued to the Managements of 9 Schools in North Kanara District for having poor strength. Out of 9 Schools, 2 were old Schools and 7 were new schools started after 1963-64. The Director of Public Instruction has been instructed to review the Orders passed by him and exercise the power given to him under Rule 16 for relaxation of the condition of average daily attendance of 25 pupils. Further, there is no question of ordering the closure of such schools. Schools with very poor strength can continue provided no grant-in-aid is asked for the Sections in which the average attendance is below 25. In the case of Schools with students belonging to minority languages, the minimum attendance is 15. Relaxation can be given for Forest areas, Malnad areas and for remote villages. The Director of Public Instruction will review all cases in which orders have been passed by him.

ಶ್ರೀ ಡಿ. ಎಸ್. ನಾಡಕರ್ಣಿ.—ಇದು ಮಹತ್ವದ ವಿಷಯ ಇದೆ. ಕೆಲವು ಪ್ರಶ್ನೆಗಳಿಗೆ ಉತ್ತರ ಕೊಡಲಿಲ್ಲವೆಂದು ಎರಡೂವರೆ ಗಂಟೆ ಚರ್ಚೆಗೆ ಅವಕಾಶ ಕೊಡಬೇಕೆಂದು ಕೇಳಿದೆ. ಕಾಲಿಂಗ್ ಅಟೆನ್‌ಶನ್‌ಗೆ ಈಗ ಅವಕಾಶ ಕೊಟ್ಟಿದ್ದಾರೆ. ನನಗೆ ಸಂಪೂರ್ಣ ಕ್ಲಾರಿಫಿಕೇಶನ್ ಕೇಳುವುದಕ್ಕೆ ಅವಕಾಶ ಮಾಡಿಕೊಡಬೇಕು. ಅವರು ಉತ್ತರದಲ್ಲಿ 1963-64ರಲ್ಲಿ ಶಾಲೆಗಳನ್ನು ಪ್ರಾರಂಭ ಮಾಡಿದ್ದಾರೆಂದು ಹೇಳಿದರು. ಅದು ಸರಿಯಲ್ಲ. ರೂಲ್ ಬದಲಾವಣೆ ಮಾಡಿದ್ದು 1967ರಲ್ಲಿ. 1967ಕ್ಕಿಂತ ಮುಂಚೆ ಪ್ರಾರಂಭ ಮಾಡಿದ ಶಾಲೆಗಳಿಗೆ ಆ ರೂಲನ್ನು ಅನ್ವಯಿಸುವುದು ತಪ್ಪು ಇದೆ. ಅದನ್ನು ಮುಚ್ಚಲಿಕ್ಕೆ ಹೇಳಿದ್ದಾರೆ. ಅದನ್ನು ಒಪ್ಪುವ ಹಾಗೆ ಇಲ್ಲ. ಒಂದು ಕಡೆ 15 ಹುಡುಗರು ಹಾಜರಾತಿ ಇದ್ದರೆ, ಅಡ್ಡಿಯಿಲ್ಲ, ಗ್ರಾಂಟು ಕೊಡುವುದಿಲ್ಲವೆಂದು ಹೇಳುತ್ತಾರೆ. ಹಾಗಾದರೆ, ರಿರ್ಯಾಕ್ಷೇಶನ್ ಮಾಡಿದ್ದೇವೆಂದು ಹೇಳಿದರೆ ಏನು ಅರ್ಥ? ಗ್ರಾಂಟ್ ಕೊಡುವುದು, ಬಿಡುವುದು, ಅವರ ಮರ್ಜಿ ಇದೆ. ಆದರೆ ಉಪಾಧ್ಯಾಯರುಗಳಿಗೆ ಪಗಾರ ನಿಲ್ಲಿಸಿದ್ದೀರಾ? ಅವರ ವಿಚಾರ ಏನು ಮಾಡಿದ್ದೀರಿ ಎಂದು ಸ್ಪಷ್ಟವಾಗಿ ಹೇಳಬೇಕು. ಇಡೀ ಮೈಸೂರು ರಾಜ್ಯದ ಜನಸಾಂದ್ರತೆ ಕಿಲೋಮೀಟರಿಗೆ 127. ನಮ್ಮಲ್ಲಿ 67 ಇದೆ. ಆದಲ್ಲದೆ ನಮ್ಮಲ್ಲಿ 82 ಪರ್‌ಸೆಂಟ್ ಕಾಡು ಜನರು ಇದ್ದಾರೆ. ಆದ್ದರಿಂದ ನಮ್ಮ ಜಿಲ್ಲೆಗೆ ಹೆಚ್ಚಿಗೆ ವಿನಾಯತಿ ಕೊಡಬೇಕು.

3-00 P.M.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಲೋಕನಭಾ ಸದಸ್ಯರಾದ ದಿನಕರ್ ದೇಸಾಯಿ ಅವರು ಮಾನ್ಯ ಶಂಕರ ಗೌಡರಿಗೆ ಒಂದು ಪತ್ರ ಬರೆದು ಎಲ್ಲ ವಿವರವನ್ನೂ ಕೊಟ್ಟಿದ್ದಾರೆ. ಬೊಂಬಾಯಿ ಎಜುಕೇಷನ್ ಆಕ್ಟ್‌ಗೆ ವಿರೋಧವಾಗಿ ನಮ್ಮ ಸರ್ಕಾರದ ಆರ್ಡರ್ ಇದೆ, ಎಸ್. ಆರ್. ಸಿ. ಆಕ್ಟ್‌ಗೆ ವಿರೋಧವಾಗಿದೆ, ನೂರಕ್ಕೆ 82 ಭಾಗ ಅರಣ್ಯವಿದ್ದು, ಎಂಟು ಹತ್ತು ಮೈಲಿಗೆ ಒಂದು ಸಣ್ಣ ಹಳ್ಳಿ ಇರತಕ್ಕ ಉತ್ತರ ಕನ್ನಡ ಜಿಲ್ಲೆಯ ವಿದ್ಯಾರ್ಥಿಗಳಿಗೆ ವಿಶೇಷ ರೀತಿಯಲ್ಲಿ ಸೌಕರ್ಯಗಳನ್ನು ಕೊಡುವುದಕ್ಕೆ ರೂಲ್ಸ್ ರಿರ್ಯಾಕ್ಟ್ಸ್ ಮಾಡುತ್ತಾರೆ ಎಂದು ಇತ್ತು. ವಿದ್ಯಾ ಇಲಾಖೆಯ ಡೈರೆಕ್ಟರವರು ವಿಚಾರ ಮಾಡಿ ಮೆರಿಟ್ಸ್ ಮೇಲೆ ತೀರ್ಮಾನ ಮಾಡಬಹುದು

(ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್)

ಎಂದು ಇದೆ. ಅದರ ಅರ್ಥ ಗ್ರಾಂಟನ್ನು ಇವರು ಮನಸ್ಸು ಮಾಡಿದರೆ ನಿಲ್ಲಿಸಬಹುದು ಎಂದಾಗುತ್ತದೆ. ಒಂದು ತರಗತಿಯಲ್ಲಿ 15 ಜನ ವಿದ್ಯಾರ್ಥಿಗಳಿದ್ದರೆ ಗ್ರಾಂಟ್ ವಗೈರೆ ಸೌಲಭ್ಯ ಕೊಡಬೇಕು ಎಂದು ಏನು ಕಾನೂನಿದೆಯೋ ಅದರ ಪ್ರಕಾರವಾಗಿ ನೋಡದೆ, ಜನಸಾಂದ್ರತೆ ಕಡಮೆ ಇರುವ ಜಿಲ್ಲೆಯಲ್ಲಿಯೂ ವಿದ್ಯಾರ್ಥಿಗಳ ಸಂಖ್ಯೆ 25 ಇರಬೇಕು, ಎಂದು ನಿಗದಿ ಮಾಡಿದ್ದಾರೆ. ಅದನ್ನು ಬದಲಾಯಿಸಿ 15 ಜನ ಇದ್ದರೂ ಕೊಡಬೇಕು, ಹಳ್ಳೀ ನಿಯಮಗಳ ಪ್ರಕಾರ ನಡೆಯುತ್ತಿರುವ ಶಾಲೆಗಳಿಗೆ ಹೊಸ ನಿಯಮಗಳನ್ನು ಅನ್ವಯಿಸಬಾರದು, ಉತ್ತರ ಕನ್ನಡ ಜಿಲ್ಲೆ ಅರಣ್ಯ ಹೆಚ್ಚಾಗಿರುವ ಪ್ರದೇಶ. ಆದ್ದರಿಂದ ಮೊದಲಿನಿಂದಲೂ ಏನೇನು ರಿಯಾಯಿತಿಗಳನ್ನು ಕೊಡಲಾಗುತ್ತಿದೆಯೋ ಅವನ್ನೆಲ್ಲ ಕೊಡಬೇಕು. ಇಲ್ಲದೆ ಹೋದರೆ ಕುಟುಂಬ ಯೋಜನೆಯನ್ನು ಆ ಜಿಲ್ಲೆಗೆ ಅನ್ವಯಿಸದೆ ಹೆಚ್ಚು ಮಕ್ಕಳು ಶಾಲೆಗಳಿಗೆ ಬರುವ ಹಾಗೆ ಮಾಡಬೇಕು.

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ನಾನು ಹೇಳಿದ ಉತ್ತರ ಬಹಳ ಸ್ಪಷ್ಟವಾಗಿದೆ. ಇದುವರೆಗೂ ಸರ್ಕಾರದವರು ಮಾಡಿರತಕ್ಕ ಗ್ರಾಂಟ್ ಇನ್ ಏಡ್ ಕೋಡ್ ಹಿಂದಿನ ಯಾವ ಕಾಯ್ದೆಗೂ ವಿರೋಧವಾಗಿಲ್ಲ, ಅದಕ್ಕೆ ಅನುಗುಣವಾಗಿಯೇ ಇದೆ. ಸರ್ಕಾರದವರು ಸರ್ವೇ ಸಾಮಾನ್ಯವಾಗಿ ಪ್ರತಿಯೊಂದು ತರಗತಿಯಲ್ಲಿ 25 ಮಕ್ಕಳು ಇರಬೇಕು ಎಂದು ಮಾಡಿರುತ್ತಾರೆ. ಅರಣ್ಯ ಪ್ರದೇಶ ಮತ್ತು ಹಿಂದುಳಿದ ಪ್ರದೇಶಗಳಲ್ಲಿ ಕನಿಷ್ಠ 15 ಇರಬೇಕು ಎಂದು ಮಾಡಿದ್ದಾರೆ. ಮಾನ್ಯ ಸದಸ್ಯರಾದ ಜಯಪ್ರಕಾಶ ನಾರಾಯಣ ಅವರು ಹೇಳಿದಂತೆ ಅರಣ್ಯ ಪ್ರದೇಶಗಳಿಗೆ ವಿಶೇಷ ಸೌಲಭ್ಯವನ್ನು ಕೊಡಬೇಕು ಎನ್ನುವ ಉದ್ದೇಶದಿಂದಲೇ ಒಂದು ತರಗತಿಯಲ್ಲಿ ಕನಿಷ್ಠ 15 ಮಕ್ಕಳು ಇದ್ದರೆ ಸಾಕು ಎಂದು ನಿರ್ದಿಷ್ಟಪಡಿಸಿದ್ದೇವೆ. ಅದಕ್ಕಿಂತ ಕಡಮೆ ಮಕ್ಕಳು ಇರುವ ಶಾಲೆಗಳಿಗೆ ಗ್ರಾಂಟನ್ನು ಕೊಡಬಾರದು ಎಂದು ಗ್ರಾಂಟ್ ಇನ್ ಏಡ್ ಕೋಡ್‌ನಲ್ಲಿದ್ದರೂ ಈ ಬಗ್ಗೆ ವಿದ್ಯಾ ಇಲಾಖೆಯ ಡೈರೆಕ್ಟರ್ ಅವರು ಕೊಟ್ಟಿರತಕ್ಕ ಆರ್ಡರನ್ನು ವಾಪಸು ಪಡೆಯುವುದಕ್ಕೆ ಹೇಳಿದ್ದೇವೆ. ಅಲ್ಲದೆ ಕಡಮೆ ಮಕ್ಕಳು ಇರುವಂಥ ಶಾಲೆಗಳನ್ನು ಮುಚ್ಚಬಾರದು, ಅಂಥ ಶಾಲೆಗಳನ್ನು ಮುಂದುವರಿಸುವುದಕ್ಕೆ ರೂಲ್ 16ರ ಪ್ರಕಾರ ಅಂಥ ಶಾಲೆಗಳನ್ನು ಮುಂದುವರಿಸಿಕೊಂಡು ಹೋಗಲು ಅವಕಾಶ ಕೊಡಿ ಎಂದು ಹೇಳಿದ್ದೇವೆ ಮತ್ತು ಗ್ರಾಂಟನ್ನು ಕೊಡುವಾಗ ಅಂಥ ಶಾಲೆಗಳಿಗೆ ಕೊಡಬಾರದು ಎಂದು ಇದ್ದರೂ ಸಹ ಯೋಗ್ಯವಾದ ಸಂದರ್ಭಗಳಲ್ಲಿ ಅಕಸ್ಮಾತ್ ಮಕ್ಕಳ ಸಂಖ್ಯೆ ಕಡಮೆಯಾಗುವುದಕ್ಕೆ ಏನಾದರೂ ಬಲವತ್ತರವಾದ ಕಾರಣಗಳು ಇದ್ದರೆ ಅಂಥವನ್ನು ಪರಿಶೀಲನೆ ಮಾಡಿ, ಸಹಾನುಭೂತಿಯಿಂದ ಪರಿಶೀಲನೆ ಮಾಡಿ ಅಂಥವುಗಳಿಗೆ ಗ್ರಾಂಟ್ ಕೊಡುವುದನ್ನು ವಿಚಾರ ಮಾಡಬೇಕು ಎನ್ನುವುದನ್ನು ಸರ್ಕಾರ ಪರಿಶೀಲನೆ ಮಾಡುತ್ತಿದೆ. ಇದನ್ನು ಈ ಮುಂಚೆಯೇ ಮಾನ್ಯ ಮಂತ್ರಿಗಳು ಕೊಟ್ಟಿರುವ ಉತ್ತರದಲ್ಲಿ ಮತ್ತು ನಾನು ಮೊನ್ನೆ ಕೊಟ್ಟಿರುವ ಉತ್ತರದಲ್ಲಿ ಸ್ಪಷ್ಟವಾಗಿ ಹೇಳಿದ್ದೇವೆ.

Collection of Land Revenue by force in the Tapasi village

ಶ್ರೀ ಜಿ. ರಾಮೇ ಗೌಡ (ದೊಡ್ಡಬಳ್ಳಾಪುರ).—ಸ್ವಾಮಿ, ಸರ್ಕಾರ ಬಲಾತ್ಕಾರವಾಗಿ ಕಂದಾಯವನ್ನು ವಸೂಲ್ಮಾಡುವುದಿಲ್ಲ ಎಂದು ಹೇಳಿ ಆರ್ಡರ್ ಕೊಟ್ಟಿದ್ದರು ಸಹ ಒಂದು ವಾರದಿಂದ ಅನೇಕ ಜೀಪುಗಳಲ್ಲಿ ಅಧಿಕಾರಿಗಳು ಮನೆಗಳಿಗೆ ಹೋಗಿ ದನಗಳನ್ನು ಹಿಡಿದು, ಅವುಗಳನ್ನು ತೆಗೆದುಕೊಂಡು ಹೋಗಿ ಬಲಾತ್ಕಾರವಾಗಿ ಕಂದಾಯವನ್ನು ವಸೂಲು ಮಾಡುತ್ತಿದ್ದಾರೆ. ಇದಕ್ಕೆ ಒಂದು ನಿದರ್ಶನವನ್ನು ಹೇಳುವುದಾದರೆ, ತಪಸಿ ಹಳ್ಳಿಯಲ್ಲಿ ರೈತರು ಇಲ್ಲದೆ ಇರುವಾಗ ಹೆಣ್ಣು ಮಗಳನ್ನು ಬಲಾತ್ಕಾರವಾಗಿ ತಳ್ಳಿ, ಅವರ ಮನೆಯಲ್ಲಿದ್ದ ಎಮ್ಮೆಯನ್ನು ತಹಸೀಲ್ದಾರರು, ರೆವೆನ್ಯೂ ಇನ್‌ಸ್ಪೆಕ್ಟರೂ ಹಿಡಿದುಕೊಂಡು ಹೋಗಿದ್ದಾರೆ. ಇದು ಬಹಳ ಅನ್ಯಾಯ. ಸರ್ಕಾರ ಒಂದು ಭರವಸೆಯನ್ನು ಕೊಟ್ಟರೂ ಸಹ ಅಧಿಕಾರಿಗಳು ಈ ರೀತಿ ಜನಗಳಿಗೆ ತೊಂದರೆ ಕೊಡತಕ್ಕುದು ಸರಿಯಲ್ಲ. ತಕ್ಷಣ ಸರ್ಕಾರ ಏನಾದರೂ ಶಿಸ್ತಿನ ಕ್ರಮ ತೆಗೆದುಕೊಂಡು ರೈತರಿಗೆ ಆಗುತ್ತಿರುವ ತೊಂದರೆಯನ್ನು ತಪ್ಪಿಸಬೇಕು.

Mr. SPEAKER.—I have just received that notice. I shall pass it on to the Government. I am afraid the Hon. Revenue Minister is not here. I shall get the information and if possible give an opportunity to the member to raise the question. Now next item.